ಆಕರ್ಷಕ ಮುಖಪುಟದ ಜೂನ್ ಸಂಚಿಕೆ ಮನಸೆಳೆಯಿತು. ಎಲ್ಲ ಬರಹಗಳು ಓದುಗರನ್ನು ಆಕರ್ಷಿಸುವಲ್ಲಿ ಸಫಲವಾಗಿವೆ.

**ಸುಂದರ್ ಬಿ.ಕೆ., ಹಾಸನ**

ಮಧುರಾ ಕರ್ಣಮ್ ಅವರ 'ಹುಡುಕಿದರಷ್ಟೇ ದಾರಿ', ಉಷಾ ನರಸಿಂಹನ್ ಅವರ ಕತೆ 'ಲಂಗರು' ಮನಮುಟ್ಟುವಂತಿವೆ. ನಾ. ಮೊಗಸಾಲೆ ಅವರ 'ಮರ', ರಾಜೀವ ನಾರಾಯಣ ನಾಯಕ ಅವರ 'ಒಂದು ನಾನ್ಸೆನ್ಸ್ ಪ್ರೇಮಕತೆ', ಮಹಾದೇವ ಹಡಪದ ಅವರ 'ಸಪ್ತಪದಿ' ಕತೆಗಳೂ ಸೇರಿದಂತೆ 'ಮಯೂರ' ಸೊಗಸಾಗಿ ಮೂಡಿಬಂದಿದೆ.

**ಎಚ್.ಎಸ್. ಸತ್ಯನಾರಾಯಣರಾವ್, ಅರಕಲವಾಡಿ**

ಸಂಗೀತವನ್ನು ಜನರ ಬಳಿ ತಂದ ಕಲಾವಿದ ಬಡೇ ಗುಲಾಂ ಅಲಿಖಾನ್. ಜಾತಿ, ಮತ, ಪಂಥಗಳನ್ನು ಮೀರಿ ನಾದ ದೇವತೆಯನ್ನು ಆರಾಧಿಸಿದ ಈ ಸಂಗೀತಗಾರನ ಕುರಿತಾದ ಎನ್. ಜಗದೀಶ ಕೊಪ್ಪ ಅವರ ಲೇಖನ 'ಸಂಗೀತ ಲೋಕದ ಸಂತ...' ಅರ್ಥಪೂರ್ಣ.

**'ಅಮೃತೇಶ್' ತಂಡರ, ಅಣ್ಣಿಗೇರಿ**

ಕಲೀಮ್ ಉಲ್ಲಾರ ಅವರ ಪ್ರಬಂಧ 'ಹುಂಜಜ್ಜನ ವಂಶಾವಳಿ'ಯ ನಿರೂಪಣೆ ಅತ್ಯುತ್ತಮವಾಗಿದೆ.

**ರಾಮಚಂದ್ರ ಭಟ್ಟ, ಶಿರಸಿ**

ಕೇಶವರೆಡ್ಡಿ ಹಂದ್ರಾಳ ಅವರ ಲೇಖನ 'ಕತೆ ಎಂದರೆ ಆಟ...' (ನನ್ನ ಕಥಾಪ್ರಸಂಗ) ಸೊಗಸಾಗಿತ್ತು. ಸಾಹಿತ್ಯ ಮುಟ್ಟಬೇಕಿರುವುದು ಓದುಗರಿಗೆ ಎಂಬ ಸತ್ಯದ ಅರಿವಿರುವ ಕತೆಗಾರನ ಪರಿಚಯಿಸಿದ್ದು ಈ ಅಂಕಣಕ್ಕೆ ಒಂದು ಹೆಮ್ಮೆಯ ಗರಿ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**




ಮಧುರಾ ಕರ್ಣಮ್ ಅವರ ಕತೆ 'ಹುಡುಕಿದರಷ್ಟೇ ದಾರಿ' ನಮಗೆ ಒಂದು ಪಾಠದಂತಿದೆ. ಬದುಕಿನ ಆಯಾಮಗಳನ್ನು ಸೂಕ್ಷ್ಮವಾಗಿ ನಿಭಾಯಿಸಿದರೆ ಮಾತ್ರ ಬಾಳು ಸೊಗಸು ಎಂಬುದನ್ನು ಕತೆಗಾರ್ತಿ ಇಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.

**ಬಾರಿಕೇಶ ಕರಿಯಪ್ಪ, ದಾವಣಗೆರೆ**

ಜಯಶ್ರೀ ಭಟ್ ಅವರ ಲಲಿತ ಪ್ರಬಂಧ 'ನೀ ಮಾಯೆಯೊಳಗೋ...' ಚೆನ್ನಾಗಿದೆ. ಬರಹದಲ್ಲಿ ತಂತ್ರಜ್ಞಾನದ ಒಳಸುಳಿಗಳನ್ನು ತಮಾಷೆಯಾಗಿ ವಿವರಿಸಲಾಗಿದೆ.

**ಸವಿತಾ ಲೋಕೇಶ್, ಬೆಂಗಳೂರು**

ಪಾವಣ್ಣನ್ ಅವರ ತಮಿಳು ಕತೆ 'ಸೈಕಲ್' ಇಷ್ಟವಾಯಿತು. ಅದನ್ನು ಅಷ್ಟೇ ಅರ್ಥವತ್ತಾಗಿ ಕೆ. ನಲ್ಲತಂಬಿ ಕನ್ನಡಕ್ಕೆ ತಂದಿದ್ದಾರೆ.

**ಎಂ. ಚಿದಾನಂದ, ಧಾರವಾಡ**

## ತಿದ್ದುಪಡಿ

ಜುಲೈ ತಿಂಗಳ ಸಂಚಿಕೆಯ 'ಕಲ್ಪನೆ ಕಾವ್ಯ' ವಿಭಾಗದಲ್ಲಿ 'ಕಾಗೆ ರಾಗ' ಕವಿತೆ ಬಿ.ಕೆ. ಮೀನಾಕ್ಷಿ ಅವರ ಹೆಸರಲ್ಲಿ ತಪ್ಪಾಗಿ ಪ್ರಕಟವಾಗಿದೆ. ಆ ಕವಿತೆ ವಿಜಯಾ ಶ್ರೀಧರ್ ಅವರದು.

—ಸಂ